ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಂಖ್ಯೆ:ಸಮನ್ವಯ:ಪರಿಷ್ಕರಣೆ:ಸೇವಾ ಶುಲ್ಕ:2002 |4538 ದಿನಾಂಕ:26-03-2018

## ಕಛೇರಿ-ಆದೇಶ

**ವಿಷಯ: ಸೇವಾ ಶುಲ್ಕ ಪರಿಷ್ಕರಣೆ ಬಗ್ಗೆ.**

ಉಲ್ಲೇಖ:
1. ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಪರಿಷ್ಕರಣೆ:ಸೇವಾ ಶುಲ್ಕ 2015/6005 ದಿನಾಂಕ 20.03.2015
2. ಕಛೇರಿ ಆದೇಶ ಸಮನ್ವಯ:ಪರಿಷ್ಕರಣೆ:ಸೇವಾಶುಲ್ಕ:2002/274 ದಿನಾಂಕ 22.04.2017

**************

ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖ(2)ರಲ್ಲಿನ ಕಛೇರಿ ಆದೇಶದಲ್ಲಿ, ಈ ಹಿಂದೆ ನಿಗದಿಪಡಿಸಲಾಗಿದ್ದ ಸೇವಾ ಶುಲ್ಕದ ದರದ ಮೇಲೆ ಶೇಕಡಾ 10 ರಷ್ಟು ಹೆಚ್ಚಳ ಮಾಡಿ ಸೇವಾ ಶುಲ್ಕವನ್ನು ದಿನಾಂಕ 01.04.2017 ರಿಂದ 31.03.2018ರವರೆಗೆ ಪರಿಷ್ಕರಣೆ ಮಾಡಲಾಗಿತ್ತು. ಅಂತೆಯೇ, ಸದರಿ ಸೇವಾ ಶುಲ್ಕದ ಪರಿಷ್ಕರಣೆಯ ಹಾಲಿ ದರವು ದಿನಾಂಕ 31.03.2018ಕ್ಕೆ ಅಂತ್ಯಗೊಳ್ಳಲಿದ್ದು, ಪ್ರಸ್ತುತ ಸಾಲಿನ ಸೇವಾ ಶುಲ್ಕವನ್ನು ಶೇಕಡ 10ರಷ್ಟು ಹೆಚ್ಚಳ ಮಾಡಿ ದಿನಾಂಕ 01.04.2018 ರಿಂದ 31.03.2019ರವರೆಗೆ '<u>ಸೇವಾ ಶುಲ್ಕ</u>'ವನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ.

I. <u>ಮಳಿಗೆಗಳಿಗೆ</u> : (ಪ್ರತಿ ವರ್ಷಕ್ಕೆ.ರೂ.ಗಳಲ್ಲಿ)

| ಕ್ರಮ. ಸಂಖ್ಯೆ | ಮಳಿಗೆ ಮಾದರಿ | 01.04.2017 ರಿಂದ 31.03.2018ರವರೆಗೆ ಚಾಲ್ತಿಯಲ್ಲಿರುವ ಸೇವಾ ಶುಲ್ಕ ದರ. | **01.04.2018ರಿಂದ 31.03.2019ರವರೆಗೆ ಪರಿಷ್ಕೃತ ದರ** |
|---|---|---|---|
| 1. | ಎ | 4985.00 | **5484.00** |
| 2. | ಬಿ | 3594.00 | **3953.00** |
| 3. | ಸಿ | 2396.00 | **2636.00** |
| 4. | ಡಿ | 1597.00 | **1757.00** |
| 5. | ಮಿನಿ/ ಸೂ.ಮಿನಿ | 799.00 | **879.00** |

II. <u>ನಿವೇಶನಗಳಿಗೆ</u> : (ಪ್ರತಿ ವರ್ಷಕ್ಕೆ.ರೂ.ಗಳಲ್ಲಿ)

| ಕ್ರಮ ಸಂಖ್ಯೆ | ಸ್ಥಳ | 01.04.2017 ರಿಂದ 31.03.2018ರವರೆಗೆ ಚಾಲ್ತಿಯಲ್ಲಿರುವ ಸೇವಾ ಶುಲ್ಕ ದರ. | **01.04.2018ರಿಂದ 31.03.2019ರವರೆಗೆ ಪರಿಷ್ಕೃತ ದರ** |
|---|---|---|---|
| 1. | 100 ಚ.ಮೀ. ವರೆಗೆ | 999.00 | **1099.00** |
| 2. | 101 ಚ.ಮೀ. ನಿಂದ 300 ಚ.ಮೀ. ವರೆಗೆ | 1997.00 | **2197.00** |
| 3. | 301 ಚ.ಮೀ. ನಿಂದ 500 ಚ.ಮೀ. ವರೆಗೆ | 2995.00 | **3295.00** |
| 4. | 501 ಚ.ಮೀ. ನಿಂದ 700 ಚ.ಮೀ. ವರೆಗೆ | 3993.00 | **4392.00** |
| 5. | 701 ಚ.ಮೀ. ನಿಂದ 1000 ಚ.ಮೀ. ವರೆಗೆ | 4985.00 | **5484.00** |
| 6. | 1001 ಚ.ಮೀ. ನಿಂದ 2000 ಚ.ಮೀ.ವರೆಗೆ | 5990.00 | **6589.00** |
| 7. | 2001 ಚ.ಮೀ.ಮೇಲ್ಪಟ್ಟು | 6976.00 | **7674.00** |

....2

III. ಬಹುಮಹಡಿ ಕಟ್ಟಡಗಳ ಮಳಿಗೆಗಳಿಗೆ ಪ್ರತಿ ವರ್ಷಕ್ಕೆ ಸೇವಾ ಶುಲ್ಕವನ್ನು ಪ್ರತಿ ಚ.ಮೀ.ಗೆ ರೂ.31.00ರಂತೆ ನಿಗದಿಪಡಿಸಲಾಗಿದೆ.

IV. ಮೇಲಿನ ಸೇವಾ ಶುಲ್ಕಗಳು ದಿನಾಂಕ 01.04.2018 ರಿಂದ ಜಾರಿಗೆ ಬರುವುದು ಮತ್ತು ಪ್ರತಿ ವರ್ಷಕೊಮ್ಮೆ ಸದರಿ ದರವನ್ನು ಶೇಕಡ 10 ರಷ್ಟು ಹೆಚ್ಚಿಸತಕ್ಕದ್ದು. ಅದರಂತೆ ಮುಂದಿನ ಪರಿಷ್ಕೃತ ದರವು 01.04.2019 ರಿಂದ ಜಾರಿಗೆ ಬರುತ್ತದೆ. ಕಾಲಕಾಲಕ್ಕೆ ಅಂದರೆ ಪ್ರತಿ ವರ್ಷಕೊಮ್ಮೆ ಕಛೇರಿ ಆದೇಶವನ್ನು ನಿರೀಕ್ಷಿಸದೆ ಸೇವಾ ಶುಲ್ಕವನ್ನು ಪರಿಷ್ಕರಿಸತಕ್ಕದ್ದು.

V. ಮಳಿಗೆ ಅಥವಾ ನಿವೇಶನ ಹಂಚಿಕೆಯು ವರ್ಷದ ಮಧ್ಯ ಭಾಗದಲ್ಲಿ ಆಗಿದ್ದಲ್ಲಿ, ಅಲ್ಲಿಂದ ಸದರಿ ಸಾಲಿನ ಅಂತ್ಯದವರೆವಿಗೂ ಅಂದರೆ ಮಾರ್ಚ್ 31ರ ವರೆಗೆ ಪ್ರೋರೇಟ (Prorata) ಆಧಾರದ ಮೇಲೆ ಲೆಕ್ಕಾಚಾರ ಮಾಡಿ. ಅದರಂತೆ ವಸೂಲಿ ಮಾಡಿ ನಂತರ ಮುಂದಿನ ವರ್ಷಗಳಲ್ಲಿ ಪೂರ್ತಿ ಹಣ ವಸೂಲು ಮಾಡತಕ್ಕದ್ದು.

VI. ಎಲ್ಲಾ ಕೈಗಾರಿಕಾ ಘಟಕಗಳಿಗೆ ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಪೂರ್ತಿ ವರ್ಷಕ್ಕೆ ಸೇವಾ ಶುಲ್ಕ ಬೇಡಿಕೆ ಬಿಲ್ಲನ್ನು ಸಿದ್ಧಪಡಿಸಿ ಅದೇ ತಿಂಗಳಿನಲ್ಲಿ ತಪ್ಪದೆ ವಸೂಲಿ ಮಾಡತಕ್ಕದ್ದು. ಇದರಿಂದ ಆ ವರ್ಷದಲ್ಲಿ ಕೈಗೊಳ್ಳುವ ದುರಸ್ತಿ ಇನ್ನಿತರೆ ಕೆಲಸಗಳನ್ನು ಯೋಜನೆಯಂತೆ ಪೂರೈಸಲು ಸಾಧ್ಯವಾಗುವುದು.

VII. ಸೇವಾ ಶುಲ್ಕವನ್ನು ಲೆಕ್ಕ ಹಾಕುವಾಗ 0-50 ಪೈಸೆಗಳು ಬಂದಲ್ಲಿ ಮೊಬಲಗನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು.

VIII. ನಿಗಮದ ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಳಿಗೆ/ನಿವೇಶನಗಳ ಹಂಚಿಕೆದಾರರಿಗೆ <u>ಸೇವಾ ಶುಲ್ಕದ ಪರಿಷ್ಕೃತ ದರವು ದಿನಾಂಕ: 01.04.2018</u>ರಿಂದ ಕಡ್ಡಾಯವಾಗಿ ಜಾರಿಗೆ ಬರುವ ವಿಷಯವನ್ನು ಸೂಕ್ತ ಸ್ವೀಕೃತಿಯೊಂದಿಗೆ ಜರೂರಾಗಿ ತಿಳಿಸಿ, ಅದರಂತೆ ವಸೂಲಿ ಮಾಡತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಅವರಿಗೆ,

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ದಾವಣಗೆರೆ/ಮಂಗಳೂರು/ವಿಜಯಪುರ/ಬಳ್ಳಾರಿ.

ಪ್ರತಿ:

1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ & ವಾಣಿಜ್ಯ), (ಸಮನ್ವಯ&ಸಾ.ಸಂ), ಕರಾಸಕೈಅನಿನಿ, ಬೆಂಗಳೂರು
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು) / (ಆ.ಲೆ.ಪ) / (ಸಿಬ್ಬಂದಿ) / ವಲಯ-1 / ವಲಯ-2, ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ವ&ಕಾಲೆ) / (ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಾಯಪಾಲಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ,
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಹುಬ್ಬಳ್ಳಿ/ ಬೆಳಗಾವಿ/ಕಲಬುರಗಿ/ಬಳ್ಳಾರಿ.
7. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
8. ವ್ಯವಸ್ಥಾಪಕರು(ಕಾನೂನು), ಕರಾಸಕೈಅನಿನಿ, ಬೆಂಗಳೂರು.
9. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು
10. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.